ಈ ಬೀಳು ಜಮೀನುಗಳು ರೆಸ್ಟೋರ್ ಆಗದೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಇ) ಚಾಮರಾಜನಗರ ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರ್ ಜಮೀನು ಬೀಳು ಬಿದ್ದಿದೆ;

ಈ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಹೆಕ್ಟೇರ್ ಜಮೀನು ಬೀಳು ಬಿದ್ದಿದೆ;

ಉ) ಬೀಳು ಭೂಮಿಯನ್ನು ರೆಸ್ಟೋರ್ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಇಲ್ಲ.

ಆ) ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 119ರಡಿ ನಿಗದಿತ ಅವಧಿಯೊಳಗಾಗಿ ಬಂದಿರುವ ಅರ್ಜಿಗಳನ್ನು ಪರಿಗಣಿಸಿ ಬೀಳು ಭೂಮಿಯನ್ನು ರೆಸ್ಟೋರ್ ಮಾಡಲಾಗುತ್ತಿದೆ.

ಇ) 552–17 ಹೆಕ್ಟೇರ್

ಈ) 69–80 ಹೆಕ್ಟೇರ್

ಉ) ನಿಗಧಿತ ಅವಧಿಯಲ್ಲಿ ಬೀಳು ರೆಸ್ಟೋರ್ ಮಾಡಲು ಅರ್ಜಿ ಸಲ್ಲಿಸಿದ್ದಲ್ಲಿ ಅದನ್ನು ನಿಯಮಾನುಸಾರ ರೆಸ್ಟೋರ್ ಮಾಡಿಕೊಡಲಾಗುವುದು.

1324 (1642) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ):– ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಪ್ಪನ್ ಕಾರ್ಯಚರಣೆಯಲ್ಲಿ ಪಾಲ್ಗೊಂಡಿದ್ದ ಅರಣ್ಯ ಇಲಾಖೆಯ ಸಿಬ್ಬಂದಿಗಳು ಯಾರು ಯಾರು (ವಿವರ ನೀಡುವುದು);

ಆ) ಪೊಲೀಸ್ ಸಿಬ್ಬಂದಿಗೆ ನೀಡಿದ ರಿವಾರ್ಡ್‌ನಂತೆಯೇ ಈ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ನೀಡಲಾಗಿದೆಯೇ;

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಚನ್ನಿಗಪ್ಪ (ಅರಣ್ಯ ಸಚಿವರು) :

ಅ) ವಿವರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ.

ಆ) ಪೊಲೀಸ್ ಸಿಬ್ಬಂದಿಗೆ ನೀಡಿದ ರಿವಾರ್ಡ್‌ನಂತೆಯೇ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ನೀಡಿರುವುದಿಲ್ಲ. ಆದರೆ ವಿಶೇಷ ಟಾಸ್ಕ್ ಫೋರ್ಸ್ ಅಡಿಯಲ್ಲಿ ಕಾರ್ಯ ನಿರ್ವಹಿಸಿದ. ಅಧಿಕಾರಿ/ಸಿಬ್ಬಂದಿಗಳ ಪೈಕಿ ಅನುಬಂಧ–2ರಲ್ಲಿ ಹೇಳಿದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಾತ್ರ ಪೊಲೀಸ್ ಇಲಾಖೆಯಿಂದ ಪ್ರೋತ್ಸಾಹ ಧನ ನೀಡಲಾಗಿದೆ.

ಇ) ಟಾಸ್ಕ್ ಫೋರ್ಸ್ ಅಡಿಯಲ್ಲಿ ಕಾರ್ಯ ನಿರ್ವಹಿಸಿದ 25 ಅರಣ್ಯ ಇಲಾಖಾ ಅಧಿಕಾರಿ/ಸಿಬ್ಬಂದಿಗಳ ಪೈಕಿ ಕೇವಲ 13 ಮಂದಿ ಅಧಿಕಾರಿ/ಸಿಬ್ಬಂದಿಗಳಿಗೆ ಪ್ರೋತ್ಸಾಹ ಧನವನ್ನು ಪೊಲೀಸ್ ಇಲಾಖೆಯು ನೀಡಿರುತ್ತದೆ. ಇನ್ನುಳಿದವರಿಗೆ ರಿವಾರ್ಡ್ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1642 ಕ್ಕೆ ಅನುಬಂಧ–1 ವೀರಪ್ಪನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅರಣ್ಯ ಇಲಾಖೆಯ ಸಿಬ್ಬಂದಿಗಳ ವಿವರ

ಭಾರತೀಯ ಅರಣ್ಯ ಸೇವೆ ಅಧಿಕಾರಿಗಳು

1 ಶ್ರೀ. ಬಿ. ಕೆ. ಸಿಂಗ್

2 ಶ್ರೀ. ಬಿ. ಕೆ. ದೀಕ್ಷಿತ್

3 ಶ್ರೀ. ವಿಜಯಕುಮಾರ್ ಗೋಗಿ

4 ಶ್ರೀ. ಆರ್. ಉದಯಕುಮಾರ್

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ. ರಾಜಣ್ಣ

ವಲಯ ಅರಣ್ಯ ಅಧಿಕಾರಿ

1 ಶ್ರೀ. ಹೆಚ್. ವಿ. ಶ್ರೀನಿವಾಸಮೂರ್ತಿ

2 ಶ್ರೀ. ಎ. ಟಿ. ವೆಂಕಟೇಗೌಡ

3 ಶ್ರೀ. ಲಿಂಗರಾಜು ಬಿ

4 ಶ್ರೀ. ಟಿ. ಎಂ. ಜಿಲಾನಿಪಾಷ

ವನಪಾಲಕ

1 ಶ್ರೀ. ಈರಯ್ಯ

2 ಶ್ರೀ. ಎನ್. ಚಿನ್ನಸ್ವಾಮಿ

3 ಶ್ರೀ. ಅಬ್ದುಲ್ ವಹಾಬ್

4 ಶ್ರೀ. ಮೊಹಮದ್ ಮುಜಾಮಿಲ್

5 ಶ್ರೀ. ಸಿ. ವೇಲಾಯುಧನ್

ಅರಣ್ಯ ರಕ್ಷಕರು

1 ಶ್ರೀ. ಸಂತೋಷ್ ಕುಮಾರ್

2 ಶ್ರೀ. ಜೆ. ಅಂದಾನಿ

3 ಶ್ರೀ. ಆರ್. ರಾಮಯ್ಯ

ಅರಣ್ಯ ವೀಕ್ಷಕರು

1 ಶ್ರೀ. ಮಾಣಿಕ್ಯಂ

2 ಶ್ರೀ. ಪಂದಪ್ಪ

3 ಶ್ರೀ. ಈರಣ್ಣ

4 ಶ್ರೀ. ತಾಂಡವ

5 ಶ್ರೀ. ಮಧುನಾಯಕ್

ಸಂಖ್ಯಾತಿರಿಕ್ತ ನೌಕರರು

1 ಶ್ರೀ. ಮುನಿಸ್ವಾಮಿ

2 ಶ್ರೀ. ಪಳನಿ

3 ಶ್ರೀ. ವೀರಪ್ಪ

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1642 ಕ್ಕೆ ಅನುಬಂಧ – 2

ವಿಶೇಷ ಟಾಸ್ಕ್ ಫೋರ್ಸ್ ಅಡಿಯಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಪೊಲೀಸ್ ಇಲಾಖೆಯಿಂದ ಪಾವತಿಸಲಾದ ಬಹುಮಾನದ (Cash reward) ವಿವರ.

ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ. ಹರಿ ಕುಮಾರ್ ಝಾ

ಉಪ ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ. ವಿಜಯಕುಮಾರ್ ಗೋಗಿ

2 ಶ್ರೀ. ಬ್ರಿಜೇಷ್‌ಕುಮಾರ್

3 ಶ್ರೀ ಕೆ. ಎಂ. ದೇವೇಗೌಡ (ನಿವೃತ್ತ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ. ರಾಜಣ್ಣ

ವಲಯ ಅರಣ್ಯ ಅಧಿಕಾರಿ

1 ಶ್ರೀ. ಬಸವರಾಜು

2 ಶ್ರೀ. ಬಸವರಾಜು

3 ಶ್ರೀ. ಮಹದೇವಯ್ಯ ಹೆಚ್.ಸಿ

ವನಪಾಲಕ

1 ಶ್ರೀ. ಸಿದ್ಧಯ್ಯ

2 ಶ್ರೀ. ಮರಿಶೆಟ್ಟಿ

3 ಶ್ರೀ. ಸಿದ್ಧಪ್ಪ

ಅರಣ್ಯ ರಕ್ಷಕ

1 ಶ್ರೀ. ಸಿದ್ಧಯ್ಯ ಪಿ

ಅರಣ್ಯ ವೀಕ್ಷಕ

1 ಶ್ರೀ. ಮೊಹಮದ್

1325 (1643) ಶ್ರೀ ಆರ್. ಧ್ರುವನಾರಾಯಣ್ (ಸಂತೇಮರಳ್ಳಿ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆನೆಗಳ ಹಾವಳಿಯಿಂದ ರೈತರ ಬೆಳೆಗಳಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಆನೆಗಳ ಹಾವಳಿಯಿಂದ ರೈತರು ಬೆಳೆದ ಬೆಳೆಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಈ ಬಗ್ಗೆ ಸದನದಲ್ಲಿ ಪರಿಹಾರ ನೀಡುವ ಭರವಸೆ ನೀಡಿದ್ದು, ರೈತರಿಗೆ ಪರಿಹಾರದ ಹಣ ನೀಡಲಾಗಿದೆಯೇ (ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಎಕರೆವಾರು ನೀಡಲಾಗಿರುವ ಪರಿಹಾರವೆಷ್ಟು;

ಉ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?